Document No - (22) 90-

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸರ್ಕಾರಿ ಸೇವೆಗಳಿಗೆ ನೇರ ನೇಮಕಾತಿಯಲ್ಲಿ ವಿವಿಧ ಸಮತಳ (Horizontal) ಮೀಸಲಾತಿಗಳನ್ನು ಕಾರ್ಯಗತಗೊಳಿಸುವಾಗ ಅಂಗವಿಕಲರಿಗೆ ಪರಿಗಣಿಸಬೇಕಾದ ರೋಸ್ಟರ್ ಬಿಂದುಗಳ ಬಗ್ಗೆ ಸ್ಪಷ್ಟೀಕರಣ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 128 ಸೆನೆನಿ 2006,
ಬೆಂಗಳೂರು, ದಿನಾಂಕ:1ನೇ ಆಗಸ್ಟ್, 2009

ಓದಲಾಗಿದೆ:

1)ದಿನಾಂಕ 20.6.1995ರ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 8 ಸೆಹಿಮ 95
2)ದಿನಾಂಕ 21.10.1995ರ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 28 ಎಸ್‌ಆರ್‌ಆರ್ 95
3)ದಿನಾಂಕ 3.9.2005ರ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 50 ಎಸ್‌ಆರ್‌ಆರ್ 2000
4)ದಿನಾಂಕ 22.11.2002ರ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 97 ಸೆನೆನಿ 2002
5)ದಿನಾಂಕ 4.1.2008ರ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 53 ಸೆನೆನಿ 2007
6)ದಿನಾಂಕ 5.9.2005ರ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 107 ಸೆನೆನಿ 2005.

ಪ್ರಸ್ತಾವನೆ :

ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ 20.6.1995ರ ಸರ್ಕಾರಿ ಆದೇಶದಲ್ಲಿ ರಾಜ್ಯ ಸರ್ಕಾರಿ ಸೇವೆಗಳಲ್ಲಿ ನೇರ ನೇಮಕಾತಿಯಲ್ಲಿ ಭಾರತ ಸಂವಿಧಾನದ ಅನುಚ್ಛೇದ 16(4)ರನ್ವಯ, ಅಳವಡಿಸಿಕೊಳ್ಳಬೇಕಾದ ಮೀಸಲಾತಿ ಪ್ರಮಾಣ ಮತ್ತು ಅದಕ್ಕಾಗಿ ಅನುಸರಿಸಬೇಕಾದ ರೋಸ್ಟರನ್ನು ನಿಗದಿಪಡಿಸಲಾಗಿದೆ.

ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ 21.10.1995ರ ಅಧಿಸೂಚನೆಯಲ್ಲಿ ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 9(1ಎ)ಯನ್ನು ತಿದ್ದುಪಡಿ ಮಾಡಿ, ರಾಜ್ಯ ಸಿವಿಲ್ ಸೇವೆಗಳಲ್ಲಿನ ಸಮೂಹ-ಸಿ ಮತ್ತು ಸಮೂಹ-ಡಿ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಯಲ್ಲಿ ಅಂಗವಿಕಲರಿಗೆ ಶೇ. 5ರಷ್ಟು ಸಮತಳ ಮೀಸಲಾತಿ (Horizontal reservation) ಕಲ್ಪಿಸಲಾಗಿದೆ.

ಕ್ರಮ ಸಂಖ್ಯೆ (3)ರಲ್ಲಿ ಓದಲಾದ ದಿನಾಂಕ 3.9.2005ರ ಅಧಿಸೂಚನೆಯಲ್ಲಿ ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 9(1ಎ)ಗೆ ತಿದ್ದುಪಡಿ ಮಾಡಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ಸಮೂಹ-ಎ ಮತ್ತು ಸಮೂಹ-ಬಿ ವೃಂದದ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಯಲ್ಲಿ ಅಂಗವಿಕಲ ಅಭ್ಯರ್ಥಿಗಳಿಗೆ ಶೇ.3ರಷ್ಟು ಸಮತಳ ಮೀಸಲಾತಿ ಕಲ್ಪಿಸಲಾಗಿದೆ.

ಕ್ರಮ ಸಂಖ್ಯೆ (4)ರಲ್ಲಿ ಓದಲಾದ ದಿನಾಂಕ 22.11.2002ರ ಆದೇಶದಲ್ಲಿ ರಾಜ್ಯ

ಸಿವಿಲ್ - ಸೇವೆಗಳಲ್ಲಿನ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಯಲ್ಲಿ ಅಂಗವಿಕಲರಿಗೆ ಕಲ್ಪಿಸಿರುವ ಸಮತಳ ಮೀಸಲಾತಿಯೂ ಒಳಗೊಂಡಂತೆ ಇತರ ಸಮತಳ ಮೀಸಲಾತಿಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ಸಾಮಾನ್ಯ ಅರ್ಹತೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರತಿ ಹಿಂದುಳಿದ ವರ್ಗಗಳಿಗೆ ಪ್ರತ್ಯೇಕವಾಗಿ ಲಭ್ಯವಾಗುವ 20 ರಿಕ್ತ ಸ್ಥಾನಗಳ ಸಮೂಹದಲ್ಲಿ ರೋಸ್ಟರ್ ಬಿಂದುಗಳನ್ನು ನಿಗದಿಪಡಿಸಲಾಗಿದೆ.

ಕ್ರಮ ಸಂಖ್ಯೆ (5)ರಲ್ಲಿ ಓದಲಾದ ದಿನಾಂಕ 4.1.2008ರ ಆದೇಶದಲ್ಲಿ ಅಂಗವಿಕಲ ಅಭ್ಯರ್ಥಿಗಳಿಗೆ ನಿಗದಿಪಡಿಸಿದ್ದ ರೋಸ್ಟರ್‌ನ 19ನೇ ಬಿಂದುವಿಗೆ ಬದಲಾಗಿ, ರೋಸ್ಟರ್‌ನ 4ನೇ ಬಿಂದುವನ್ನು ನಿಗದಿಪಡಿಸಿ ಆದೇಶಿಸಲಾಗಿದೆ. ಇದೇ ರೋಸ್ಟರನ್ನು 20 ರಿಕ್ತ ಸ್ಥಾನಗಳ ಬದಲಾಗಿ 100 ರಿಕ್ತ ಸ್ಥಾನಗಳಿಗೆ ಅನ್ವಯಿಸಿದಲ್ಲಿ ಅಂಗವಿಕಲ ಅಭ್ಯರ್ಥಿಗಳಿಗೆ ಲಭ್ಯವಾಗುವ ರೋಸ್ಟರ್ ಬಿಂದುಗಳ ಸಂಖ್ಯೆಗಳು 4, 24, 44, 64 ಮತ್ತು 84 ಆಗುತ್ತವೆ. ಈ ರೋಸ್ಟರ್ ಬಿಂದುಗಳು ಸಮೂಹ-ಸಿ ಮತ್ತು ಸಮೂಹ-ಡಿಗೆ ಸೇರಿದ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಗೆ ಅನ್ವಯವಾಗುತ್ತವೆ.

ಕ್ರಮ ಸಂಖ್ಯೆ (6)ರಲ್ಲಿ ಓದಲಾದ ದಿನಾಂಕ 5.9.2005ರ ಸರ್ಕಾರಿ ಆದೇಶದಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ಸಮೂಹ-ಎ ಮತ್ತು ಸಮೂಹ-ಬಿ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಯಲ್ಲಿ ಅಂಗವಿಕಲರಿಗೆ ಕಲ್ಪಿಸಿರುವ ಶೇ.3ರಷ್ಟು ಸಮತಳ ಮೀಸಲಾತಿಯನ್ನು ಜಾರಿಗೊಳಿಸಲು ಸೂಚನೆಗಳನ್ನು ನೀಡಲಾಗಿದೆ. ಈ ಆದೇಶದನ್ವಯ, ಸಾಮಾನ್ಯ ಅರ್ಹತೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರತಿ ಹಿಂದುಳಿದ ವರ್ಗಗಳಿಗೆ ಪ್ರತ್ಯೇಕವಾಗಿ ಲಭ್ಯವಾಗುವ ರಿಕ್ತ ಸ್ಥಾನಗಳ ಸಮೂಹದಲ್ಲಿ ಪ್ರತಿ ನೂರರ ಒಂದು ಗುಂಪಿನಲ್ಲಿ ಪ್ರತಿ 19, 59 ಮತ್ತು 99ನೇ ರೋಸ್ಟರ್ ಬಿಂದುಗಳನ್ನು ಅಂಗವಿಕಲ ಅಭ್ಯರ್ಥಿಗಳಿಗಾಗಿ ಮೀಸಲಿರಿಸತಕ್ಕದ್ದೆಂದು ಮತ್ತು ಈ ಮೂರು ಬಿಂದುಗಳಲ್ಲಿ 19ನೇ ಬಿಂದುವನ್ನು ದೃಷ್ಟಿಮಾಂದ್ಯರಿಂದ (blindness or low vision), 59ನೇ ಬಿಂದುವನ್ನು ಶ್ರವಣ ದೋಷವುಳ್ಳವರಿಂದ (hearing impairment) ಮತ್ತು 99ನೇ ಬಿಂದುವನ್ನು ಚಲನವಲನ ವೈಕಲ್ಯ (locomotor disability or cerebral palsy) ಇರುವ ಅಭ್ಯರ್ಥಿಗಳಿಗೆ ಮೀಸಲಿರಿಸತಕ್ಕದ್ದೆಂದು ಆದೇಶಿಸಲಾಗಿರುತ್ತದೆ. ಅಲ್ಲದೇ ಈ ಬಿಂದುಗಳೆದುರು ನಿರ್ದಿಷ್ಟಪಡಿಸಿದ ಅಂಗವಿಕಲತೆಯುಳ್ಳ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಬೇರೆ ಅಂಗವಿಕಲತೆಯುಳ್ಳ ಅಭ್ಯರ್ಥಿಗಳನ್ನು ಈ ಬಿಂದುಗಳೆದುರು ಆಯ್ಕೆಗೆ ಪರಿಗಣಿಸತಕ್ಕದ್ದೆಂದು ಆದೇಶಿಸಲಾಗಿದೆ. ಇದೇ ತತ್ವವನ್ನು ಅನುಸರಿಸಿ, ರಾಜ್ಯ ಸಿವಿಲ್ ಸೇವೆಗಳಲ್ಲಿನ ಸಮೂಹ-ಸಿ ಮತ್ತು ಸಮೂಹ-ಡಿಗೆ ಸೇರಿದ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಯಲ್ಲಿ ದೃಷ್ಟಿ ಮಾಂದ್ಯರಿಗೆ, ಶ್ರವಣ ದೋಷವುಳ್ಳವರಿಗೆ, ಚಲನವಲನ ವೈಕಲ್ಯ ಉಳ್ಳವರಿಗೆ ಹಾಗೂ ಕುಷ್ಠರೋಗದಿಂದ ಗುಣಮುಖರಾದವರಿಗೆ ಮೀಸಲಾತಿಯನ್ನು ಅನ್ವಯಿಸುವ ಬಗ್ಗೆ ಸರ್ಕಾರ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

3

## ಆದೇಶ

ರಾಜ್ಯ ಸಿವಿಲ್ ಸೇವೆಗಳಲ್ಲಿನ ಸಮೂಹ-ಸಿ ಮತ್ತು ಸಮೂಹ-ಡಿ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಯಲ್ಲಿ ನಿಗದಿಪಡಿಸಿರುವ ಶೇ.5ರ ಮೀಸಲಾತಿಯಲ್ಲಿ ಶೇ.2ನ್ನು ದೃಷ್ಟಿಮಾಂದ್ಯತೆಯುಳ್ಳವರಿಗೆ, ತಲಾ ಶೇ.1ನ್ನು ಶ್ರವಣದೋಷವುಳ್ಳವರಿಗೆ, ಚಲನವಲನ ವೈಕಲ್ಯವುಳ್ಳವರಿಗೆ ಮತ್ತು ಕುಷ್ಠರೋಗದಿಂದ ಗುಣಮುಖರಾದ ಅಂಗವಿಕಲರಿಗೆ / ಬುದ್ಧಿಮಾಂದ್ಯತೆ / ಮಾನಸಿಕ ಅಸ್ವಸ್ಥತೆ (Mental retardation/Mental illnes) ಹೊಂದಿರುವವರಿಗೆ ಮೀಸಲಿರಿಸಲು ಆದೇಶಿಸಲಾಗಿದೆ. ಈ ಮೀಸಲಾತಿಯನ್ನು ಜಾರಿಗೊಳಿಸಲು ದಿನಾಂಕ 4.1.2008ರ ಆದೇಶ ಸಂಖ್ಯೆ: ಸಿಆಸುಇ 53 ಸೆನೆನಿ 2007ರಲ್ಲಿ ನಿಗದಿಪಡಿಸಿರುವ 20 ಬಿಂದುಗಳ ರೋಸ್ಟರನ್ನು 100 ರಿಕ್ತ ಸ್ಥಾನಗಳಿಗೆ ಅನ್ವಯಿಸಿ, ಅದರಲ್ಲಿ 4, 24ನೇ ಬಿಂದುಗಳನ್ನು ದೃಷ್ಟಿಮಾಂದ್ಯತೆಯುಳ್ಳವರಿಗೆ, 44ನೇ ಬಿಂದುವನ್ನು ಶ್ರವಣ ದೋಷವುಳ್ಳವರಿಗೆ, 64ನೇ ಬಿಂದುವನ್ನು ಚಲನವಲನ ವೈಕಲ್ಯ ಇರುವವರಿಗೆ ಮತ್ತು 84ನೇ ಬಿಂದುವನ್ನು ಕುಷ್ಠರೋಗದಿಂದ ಗುಣಮುಖರಾದ ಅಂಗವಿಕಲರಿಗೆ / ಬುದ್ಧಿಮಾಂದ್ಯತೆ / ಮಾನಸಿಕ ಅಸ್ವಸ್ಥತೆ ಹೊಂದಿರುವವರಿಗೆ ಮೀಸಲಿರಿಸತಕ್ಕದ್ದೆಂದು ಮತ್ತು ಈ ಬಿಂದುಗಳೆದುರು ನಿರ್ದಿಷ್ಟಪಡಿಸಿದ ಅಂಗವಿಕಲ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಬೇರೆ ಅಂಗವಿಕಲತೆ ಇರುವವರನ್ನು ಆಯ್ಕೆಗೆ ಪರಿಗಣಿಸತಕ್ಕದ್ದೆಂದು ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

Devaraju
(ದೇವರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-1)

ಇವರಿಗೆ
ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು - ಇದನ್ನು ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಿ 1000 ಪ್ರತಿಗಳನ್ನು ಸಿಆಸುಇ(ಸೇವಾ ನಿಯಮಗಳು-ಃ) ನಂ.31, ವಿಧಾನ ಸೌಧ, ಬೆಂಗಳೂರು ಇವರಿಗೆ ಒದಗಿಸಬೇಕೆಂದು ಕೋರಿದೆ.

**ಪ್ರತಿ:**

1) ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು
2) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು-560 001
3) ಎಲ್ಲಾ ಇಲಾಖಾ ಮುಖ್ಯಸ್ಥರುಗಳು/ಜಿಲ್ಲಾಧಿಕಾರಿಗಳು/ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
4) ಮಾನ್ಯ ಮುಖ್ಯ ಮಂತ್ರಿಯವರ ಅಪ್ತ ಕಾರ್ಯದರ್ಶಿಯವರು, ವಿಧಾನ ಸೌಧ, ಬೆಂಗಳೂರು-1
5) ಕಾನೂನು ಕೋಶದ ಮುಖ್ಯಸ್ಥರು ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಸಿಆಸುಇ, ಬಹುಮಹಡಿ ಕಟ್ಟಡ, ಬೆಂಗಳೂರು-1
6) ಪ್ರಧಾನ ಕಾರ್ಯದರ್ಶಿಯವರು/ಕಾರ್ಯದರ್ಶಿಯವರು, ಕರ್ನಾಟಕ ವಿಧಾನ ಸಭೆ/ವಿಧಾನ ಪರಿಷತ್ತು, ವಿಧಾನ ಸೌಧ, ಬೆಂಗಳೂರು

..4..

7) *ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು-1
8) *ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು-1
9) *ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು-1
10) *ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ನ್ಯಾಯಮಂಡಳಿ, ಬಿ.ಡಿ.ಎ. ಕಾಂಪ್ಲೆಕ್ಸ್, ಇಂದಿರಾನಗರ, ಬೆಂಗಳೂರು-38
11) ಶಾಖಾ ರಕ್ಷಾ ಕಡತ/ಬಿಡಿ ಪ್ರತಿಗಳು.

(* ಮುಖ ಪತ್ರದೊಂದಿಗೆ)